- ಸಭಾ ಪೂರ್ವ ಚರ್ಚಿಸಬೇಕಾದ ವಿಷಯಗಳ ಪಟ್ಟಿ ಇರಬೇಕು.
- ಸದಸ್ಯರು ವಿಷಯ ಪಟ್ಟಿಗೆ ಸಂಬಂಧಿಸಿದಂತೆ ಸಿದ್ಧತೆ ಮಾಡಿಕೊಂಡು ಸಭೆಗೆ ಹಾಜರಾಗುವುದು.
- 2/3ನೇ ಭಾಗದಷ್ಟು ಸದಸ್ಯರು ಸಭೆಗೆ ಹಾಜರಿರಬೇಕು.
- ಪ್ರಾರಂಭದಲ್ಲಿ ಪ್ರೇರಕಿಯು ಸಭೆಗೆ ಸರ್ವಸದಸ್ಯರನ್ನು ಸ್ವಾಗತಿಸಬೇಕು. ಸದಸ್ಯರಲ್ಲಿ ಒಬ್ಬರನ್ನು ಅಂದಿನ ಸಭೆಯ ಅಧ್ಯಕ್ಷರಾಗಿ ಗುರುತಿಸಬೇಕು.
- ವಿಷಯ ಪಟ್ಟಿಯಲ್ಲಿರುವ ವಿಷಯಗಳ ಬಗ್ಗೆ ಚರ್ಚೆ ನಡೆಸಿ, ನಿರ್ಣಯ ತೆಗೆದುಕೊಂಡು, ನಡವಳಿ ಪುಸ್ತಕದಲ್ಲಿ ದಾಖಲಿಸಬೇಕು.
- ವಿಷಯ ಪಟ್ಟಿಯಲ್ಲಿನ ಅಂಶ ಚರ್ಚಿತವಾಗಿ, ನಿರ್ಣಯ ಕೈಗೊಂಡು ದಾಖಲಾಗುವವರೆಗೆ ವಿಚಾರಣೆ ಅಂಶ ಚರ್ಚಿಸಬಾರದು ಅದರಂತೆ ಉಳಿದ ಅಂಶಗಳನ್ನು ಅನ್ವಯಿಸಬೇಕು.
- ಚರ್ಚೆ ನಡೆಯುವಾಗ ವಿಷಯಾಂತರವಾಗಬಾರದು.
- ಪ್ರತಿ ಸದಸ್ಯರೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಸ್ವತಂತ್ರರು.
- ಎಲ್ಲಾ ನಿರ್ಣಯಗಳು ನಡವಳಿ ಪುಸ್ತಕದಲ್ಲಿ ದಾಖಲಾದ ಬಳಿಕ ಸದಸ್ಯ ಕಾರ್ಯದರ್ಶಿಯವರು ನಡವಳಿ ಪುಸ್ತಕದಲ್ಲಿ ದಾಖಲಾದ ನಿರ್ಣಯಗಳನ್ನು ಮತ್ತೊಮ್ಮೆ ಓದಬೇಕು.
- ಓದಿದ ನಂತರ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಸಹಿ ಮಾಡಬೇಕು. ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಸಭೆ ಮುಕ್ತಾಯಗೊಳಿಸುವುದು.

**ಮೀನಾ ಕಾರ್ಯಕ್ರಮದ ಉದ್ದೇಶಗಳು :**

- ಶಿಕ್ಷಣ ಪ್ರಕ್ರಿಯೆಯಲ್ಲಿ ಹೆಣ್ಣು ಮಕ್ಕಳ ಭಾಗವಹಿಸುವಿಕೆಯನ್ನು ಉತ್ತಮಪಡಿಸುವುದು.
- ಹೆಣ್ಣುಮಕ್ಕಳ ದಾಖಲಾತಿ, ಹಾಜರಾತಿಯನ್ನು ಉತ್ತಮಪಡಿಸುವುದು.
- ಹೆಣ್ಣುಮಕ್ಕಳ ಶಿಕ್ಷಣದ ಬಗ್ಗೆ ಸಮುದಾಯದಲ್ಲಿ ಜಾಗೃತಿ ಮೂಡಿಸುವುದು.
- ಸಾಮಾಜಿಕ ಸಮಸ್ಯೆಗಳಾದ ಬಾಲ್ಯವಿವಾಹ, ಲಿಂಗ ತಾರತಮ್ಯ, ವರದಕ್ಷಿಣೆ, ಇತ್ಯಾದಿಗಳ ಬಗ್ಗೆ ಸಮುದಾಯದಲ್ಲಿ ಜಾಗೃತಿ ಮೂಡಿಸುವುದು.
- ಹೆಣ್ಣು ಮಕ್ಕಳಲ್ಲಿ ನಾಯಕತ್ವದ ಗುಣಗಳನ್ನು ಬೆಳೆಸುವುದು.



**ಮೀನಾ ಈ ಶತಮಾನದ**
**ಜಾಗೃತ ಬಾಲಕಿಯರ**
**ಸಂಕೇತ**
**ಮೀನಾ ದಿನಾಚರಣೆ**
**ಪ್ರತಿ ವರ್ಷ 24ನೇ**
**ಸೆಪ್ಟೆಂಬರ್**
**ಹಿರಿಯ ಪ್ರಾಥಮಿಕ ಶಾಲೆಗಳ**
**ಮೀನಾ ತಂಡ–ಹೆಣ್ಣುಮಕ್ಕಳ**
**ಸಬಲೀಕರಣದತ್ತ**
**ಮತ್ತೊಂದು ಹೆಜ್ಜೆ**

# ಮೀನಾ

**ಮೀನಾ ತಂಡಗಳ ವಿಶೇಷತೆ**

- ಬಾಲಕಿಯರ ಆತ್ಮ ವಿಶ್ವಾಸ ಹೆಚ್ಚಳ
- ಮೀನಾ ಮೇಳಗಳ ಮೂಲಕ ಸಮುದಾಯದ ಜಾಗೃತಿ
- ಸ್ಥಳೀಯ ಸಮಸ್ಯೆಗಳಿಗೆ ಪರಿಹಾರ
- ಚಟುವಟಿಕೆಗಳ ದಾಖಲೆಗೆ ಮೀನಾ ತಂಡಕ್ಕೆ 'ಮೀನಾ ಡೈರಿ'
- ಬಾಲಕಿಯರಲ್ಲಿ ಚುರುಕುತನ, ಸಂವಹನ, ಆತ್ಮವಿಶ್ವಾಸ, ಧೈರ್ಯಗಳಿಗೆ ಮೀನಾ ಸ್ಫೂರ್ತಿ

ಪ್ರಕಟನೆ : ಪಡಿ, 'ಗಣೇಶ', ನಿಯರ್ ಕುಲಾಸೊ ಆಸ್ಪತ್ರೆಯ ಬಳಿ,
2ನೇ ಅಡ್ಡರಸ್ತೆ, ಬೆಂದೂರ್‌ವೆಲ್, ಮಂಗಳೂರು–575 002.
ದೂರವಾಣಿ ಸಂಖ್ಯೆ : 0824 – 2439895

24 HOURS NATIONAL HELPLINE CHILD LINE 1098 NIGHT & DAY TOLL FREE

## ತಂಡದ ರಚನೆ

ಮೀನಾ ಇಪ್ಪತ್ತು ಸಮಾನ ಮನಸ್ಕ ಗೆಳೆಯ / ಗೆಳತಿಯರನ್ನು ಒಳಗೊಂಡ ಕ್ರಿಯಾಶೀಲ ಬಳಗ. ಅದರಲ್ಲಿ 10 ಗೆಳತಿಯರು, 5 ಗೆಳೆಯರು ಮತ್ತು 5 ಜನ ಅನಿಮಿಯತವಾಗಿ ಶಾಲೆಗೆ ಬರುವ ಗೆಳತಿಯರು. ಮೀನಾ ತಂಡ ಪ್ರತಿವರ್ಷ ಜೂನ್ ತಿಂಗಳಲ್ಲಿ ರಚನೆಯಾಗುತ್ತದೆ.

### ತಂಡದ ಸದಸ್ಯರು ಹೇಗಿರಬೇಕು ಎಂದರೆ....

- ಉತ್ತಮ ಸಂವಹನ/ವಾಕ್ ಚಾತುರ್ಯ ಕೌಶಲ ಹೊಂದಿರಬೇಕು.
- ಮುಂದಾಳತ್ವ/ನಾಯಕತ್ವ ಗುಣವಿರಬೇಕು.
- ಸಕಾರಾತ್ಮಕ ಮನೋಭಾವ ಹೊಂದಿರಬೇಕು.
- ಇತರರ ಸಮಸ್ಯೆಗಳಿಗೆ ಸ್ಪಂದಿಸುವ ಮನೋಭಾವವುಳ್ಳವರಾಗಿರಬೇಕು.
- ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರಬೇಕು.

### ತಂಡದಲ್ಲಿ ಗಂಡು ಮಕ್ಕಳು ಯಾಕಿರಬೇಕು ಎಂದರೆ....

- ಹೆಣ್ಣು-ಗಂಡು ಎಂಬ ತಾರತಮ್ಯವಿಲ್ಲದೆ ಇಬ್ಬರಿಗೂ ಸಮಾನ ಆದ್ಯತೆ ನೀಡುವುದು.
- ಸಮಾನ ಜವಾಬ್ದಾರಿ ಹಂಚಿಕೆ ನಿರ್ವಹಿಸುವುದು.
- ಲಿಂಗ ಸಮಾನತೆ ಅರಿವು ಮೂಡಿಸುವುದು.
- ಬಾಲಕಿಯರಲ್ಲಿರುವ ಹಿಂಜರಿಕೆ ಮತ್ತು ಸಂಕುಚಿತ ಭಾವನೆ ತೊಡೆದು ಹಾಕುವುದು.

### ಶಾಲೆಗೆ ಅನಿಮಿಯತ ಮಕ್ಕಳು ತಂಡದಲ್ಲಿ ಯಾಕಿರಬೇಕು ಎಂದರೆ....

- ಶಾಲೆ ಬಿಟ್ಟ, ಶಾಲೆಗೆ ದಾಖಲಾಗದೆ ಇರುವ ಬಾಲಕಿಯರನ್ನು ಗುರುತಿಸಿ ಶಾಲೆಗೆ ಬರುವಂತೆ ಪ್ರೇರೇಪಿಸುವುದು.
- ಸಮುದಾಯದಲ್ಲಿರುವ ಸಮಸ್ಯೆಗಳನ್ನು ಅವರ ಮೂಲಕ ಗುರುತಿಸಿ, ತಂಡದಿಂದ ಪರಿಹರಿಸುವುದು.
- ವಿಶೇಷ ಅಗತ್ಯವುಳ್ಳ ಮಕ್ಕಳಿಗೂ ಅವಕಾಶ ಒದಗಿಸಬೇಕು.

ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಶಾಲೆಯಲ್ಲಿ ಮುಖ್ಯ ಗುರುಗಳ ಮಾರ್ಗದರ್ಶನದಲ್ಲಿ, ಶಿಕ್ಷಕರ ಜೊತೆಗೂಡಿ ಶಾಲೆಯ ಉನ್ನತ ತರಗತಿಯ ಮಕ್ಕಳನ್ನು ಆಯ್ಕೆ ಮಾಡಲಾಗುತ್ತದೆ.

## ಮೀನಾ ತಂಡದ ಮೇಲ್ವಿಚಾರಣೆ...

ಮೀನಾ ತಂಡದ ಸಂಪೂರ್ಣ ಮೇಲ್ವಿಚಾರಣೆ ಶಾಲೆಯುಲ್ಲಿ ಮುಖ್ಯ ಗುರುಗಳದ್ದಾಗಿರುತ್ತದೆ. ಶಾಲೆಯ ಕ್ರಿಯಾಶೀಲ ಶಿಕ್ಷಕಿ/ಕರೊಬ್ಬರು ಮೀನಾ ತಂಡಕ್ಕೆ ಮಾರ್ಗದರ್ಶಕರಾಗಿ ತಂಡವನ್ನು ಮುನ್ನೆಡೆಸುತ್ತಾರೆ. ಶಾಲೆಯಲ್ಲಿ ಮಹಿಳಾ ಶಿಕ್ಷಕಿ ಇಲ್ಲದಿದ್ದಲ್ಲಿ ಆಸಕ್ತ ಶಿಕ್ಷಕರು ಮಾರ್ಗದರ್ಶಕರಾಗಿ ಕಾರ್ಯನಿರ್ವಹಿಸುತ್ತಾರೆ. ಅದರ ಜೊತೆಯಲ್ಲಿ ತಂಡಕ್ಕೊಬ್ಬರನ್ನು ಮೀನಾ ತಂಡದಲ್ಲಿನ ಬಾಲಕಿಯನ್ನು ಪ್ರೇರಕಿಯಾಗಿ ಆಯ್ಕೆ ಮಾಡಿಕೊಂಡು, ಪ್ರೇರಕಿಯ ನೇತೃತ್ವದಲ್ಲಿ ಮುಂದೆ ಸಾಗಬೇಕು.

### ಪ್ರೇರಕಿಯ ಆಯ್ಕೆ ಹೇಗಿರುತ್ತದೆಂದರೇ....

- ಬಾಲಕಿಯಲ್ಲಿರುವ ಗುಣ ಮತ್ತು ಕೌಶಲಗಳನ್ನು ಗಮನಿಸಿ ಆಯ್ಕೆ ಮಾಡುವುದು.
- ಪ್ರಜಾಪ್ರಭುತ್ವದ ಮಾದರಿಯಲ್ಲಿ ತಂಡದ ಸದಸ್ಯರ ಅಭಿಮತ ಸಂಗ್ರಹದ ಮೂಲಕ ಆಯ್ಕೆ ಮಾಡುವುದು.
- ಕೈ ಎತ್ತುವುದರ ಮೂಲಕ ಮಾಡಬಹುದು.
- ಚೀಟಿ ಹಾಕಿ, ಲಾಟರಿ ಮೂಲಕ ಆಯ್ಕೆ ಮಾಡಬಹುದು.
- ಧ್ವನಿ ಮತದ ಮೂಲಕ ಆಯ್ಕೆ ಮಾಡಬಹುದು.
- 'ಸಮಾಜ ಮಿತಿ' ತಂತ್ರದ ಮೂಲಕ ಆಯ್ಕೆ ಮಾಡಬಹುದು.

### ಮೀನಾ ಸಭೆ (ಮೀನಾ ಕ್ಯಾಬಿನೆಟ್)

- ಪ್ರತಿ ಶನಿವಾರ ಕೊನೆ ಅವಧಿಯಲ್ಲಿ ಮೀನಾ ತಂಡದ ಸಭೆ ಜರುಗಬೇಕು. ಅದನ್ನು ಸಭಾ ನಡವಳಿಕೆ ರೀತಿ ದಾಖಲಿಸಬೇಕು.
- ಮೀನಾ ತಂಡದ ಸಭೆ/ಚಟುವಟಿಕೆಗಾಗಿಯೇ ಶಾಲೆಯ ಒಂದು ಕೊಠಡಿ ಮೀಸಲಾಗಿರುತ್ತದೆ.
- ಸಭೆಗಳಲ್ಲಿ ಸಮಸ್ಯೆಗಳು, ಯಶೋಗಾಥೆಗಳು, ಕಾರ್ಯಕ್ರಮಗಳ ಆಯೋಜನೆ ಸೇರಿದಂತೆ ಒಟ್ಟಾರೆ ಮೀನಾಕ್ಕೆ ಆ ಕೊಠಡಿ ಕೇಂದ್ರವಾಗಿರುತ್ತದೆ.
- ಮೀನಾ ತಂಡದ ತರಬೇತಿಗಳು ಈ ಕೊಠಡಿಯಲ್ಲಿಯೇ ನಡೆಯುತ್ತವೆ.

### ಸಭೆ ನಡೆಸುವಾಗ ಗಮನಿಸಬೇಕಾದ ಅಂಶಗಳು :

- ಪ್ರೇರಕಿ ಹಾಗೂ ಮಾರ್ಗದರ್ಶಿ ಶಿಕ್ಷಕರ ಸೂಚನೆಯನ್ವಯ ಸಭೆ ನಡೆಯುವ ದಿನಾಂಕ ಅವಧಿ ನಿಗದಿಪಡಿಸಬೇಕು.